



ಬಿಂದುಮಾಲಿನಿ ಸಂಗೀತ ಸಂಯೋಜನೆಯ 'ಅರುವಿ' ತಮಿಳು ಚಿತ್ರದ ಪೋಸ್ಟರ್

ಅಲ್ಲದಿದ್ದರೂ ನಿರ್ದೇಶಕರು ಮತ್ತು ಸಿನಿಮಾ ತಂಡಕ್ಕೆ ಒಪ್ಪಿಗೆ ಆಗುವ ಹಾಗೆ ಕೆಲಸ ಮಾಡಬೇಕಾಗುತ್ತದೆ. ಇದೊಂದು ಬಗೆಯಲ್ಲಿ ಪ್ರಾಡಕ್ಟ್ ಆ್ಯಂಡ್ ಡೆಲಿವರಿ. ನನಗಿಷ್ಟ ಬಂದ ಹಾಗೆ ಮಾಡಲು ಸಾಧ್ಯವಿಲ್ಲ. ಹಾಗಾಗಿ ಅವರು ಮೆಚ್ಚಿಕೊಳ್ಳುವ ಹಾಗೆ ಕೆಲಸ ಮಾಡಬಲ್ಲೆನೇ ಎಂಬ ಅನಿಶ್ಚಿತತೆ ಪ್ರತಿ ಹಂತದಲ್ಲಿಯೂ ಇರುತ್ತದೆ. ಆತಂಕ ಇರುತ್ತದೆ. ಈ ಆತಂಕದಲ್ಲಿ ಕೆಲಸ ಮಾಡುವುದು ಒಂದು ರೀತಿಯ ಥ್ರಿಲ್ ಕೂಡ ಹೌದು.

ಒಂದು ಬಿಂದುವಿನಿಂದಲೇ ಚಿತ್ರವೊಂದು ಆರಂಭಗೊಳ್ಳುತ್ತದಲ್ಲವೇ? ಆ ಬಿಂದುವಿನಿಂದ ಶುರುಮಾಡಿ ಹೊಸ ಹೊಸ ಸಾಧ್ಯತೆಗಳನ್ನು ತೆರೆಯುತ್ತಾ ಮಿತಿಗಳನ್ನೂ ತಿಳಿದುಕೊಳ್ಳುತ್ತಾ ಚಿತ್ರವಾಗಬೇಕು. ಅದೊಂದು ಬಗೆಯ ಶೋಧನೆ. ಸಿನಿಮಾ ಸಂಗೀತ ಸಂಯೋಜನೆ ಎನ್ನುವುದು ಸ್ಪಾಂಟೇನಿಟಿ ಮತ್ತು ಪ್ಲ್ಯಾನಿಂಗ್ ಇವೆರಡರ ನಡುವಿನಲ್ಲಿ ನಡೆಯುವಂಥದ್ದು. ಇದೊಂದು ಚಿತ್ರದ ಹಾಗೆ. ಸಂಗೀತ ಸಂಯೋಜನೆ ಎಂದರೆ, ಕ್ಯಾನ್ವಾಸಿನ ಚೌಕಟ್ಟಿನೊಳಗೆ ನನಗೇ ಗೊತ್ತಿಲ್ಲದಿರುವ ವಿನ್ಯಾಸವೊಂದನ್ನು ಅರಿಯುತ್ತಲೇ ರಚಿಸುತ್ತ ಹೋಗುವುದು...